(ಗೊಂದಲ)

ಶ್ರೀ ವಿ.ಮುನಿಯಪ್ಪ: ಇದು ಕೆ.ಇ.ಬಿ.ಗೆ ಸಂಬಂಧಪಟ್ಟಂತಹ ವಿಷಯ, ಬಹಳ ಗಹನವಾದಂತಹ ವಿಷಯ, ಆದುದರಿಂದ ಇದನ್ನು ಪ್ರಸ್ತಾಪ ಮಾಡಬೇಕು.

(ಗೊಂದಲ)

ಉಪಾಧ್ಯಕ್ಷರು: ಅವರಿಗೂ ಸಹ ಅವಕಾಶ ಕೊಡುತ್ತೇವೆ. ನಾನು ಹೇಳುವುದೇನೆಂದರೆ, ಅಧ್ಯಕ್ಷರು ಒಂದು ಪಟ್ಟಿ ಮಾಡಿ ಇಟ್ಟಿದ್ದಾರೆ. ಶೂನ್ಯ ವೇಳೆಯಲ್ಲಿ ಯಾರ್ಯಾರು ಮಾತನಾಡುತ್ತಾರೆ, ಅಂತವರ ಹೆಸರನ್ನು ಪಟ್ಟಿ ಮಾಡಿ ಇಟ್ಟಿದ್ದಾರೆ.

(ಗೊಂದಲ)

ಬೇಕಾದರೆ ಅವರಿಗೂ ಸಹ ಅವಕಾಶ ಮಾಡಿ ಕೊಡೋಣ.

ಮಾನ್ಯ ಸದಸ್ಯರು: ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಸಹ ಈಗ ಗೃಹ ಖಾತೆಗೆ ಸಂಬಂಧಪಟ್ಟಂತಹ ವಿಷಯವನ್ನು ಪ್ರಸ್ತಾಪ ಮಾಡಿದ್ದು, ನನಗೂ ಸಹ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು: ಪ್ರಸ್ತಾಪ ಮಾಡಿ.

ಶ್ರೀ ಕೆ.ಎನ್.ನಾಗೇಗೌಡ: ನಾಳೆ ಶೂನ್ಯ ವೇಳೆಯಲ್ಲಿ ಇದಕ್ಕೆ ಸಂಬಂಧಪಟ್ಟಂತಹ ಮಂತ್ರಿಗಳು ಇರುತ್ತಾರೆ, ಆ ಸಮಯದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದರೆ ತಮಗೆ ಒಳ್ಳೆಯ ಉತ್ತರಗಳು ಸಿಗುತ್ತದೆ. ಹಾಗೂ ಪ್ರಯೋಜನ ಆಗುತ್ತದೆ.

ಉಪಾಧ್ಯಕ್ಷರು: ಪ್ರಸ್ತಾಪ ಮಾಡಲಿ ಬಿಡಿ.

(ಊ) ಕೊಡಗಿನಲ್ಲಿ ''ಐಎಸ್‌ಐ'' ಜಾಲ ಕಾರ್ಯಾಚರಣೆ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿರುವ ಬಗ್ಗೆ

ಶ್ರೀ ಎಂ.ಪಿ.ಅಪ್ಪಚ್ಚುರಂಜನ್ (ಸೋಮವಾರ ಪೇಟೆ): ಕೊಡಗಿನಲ್ಲಿ ಕನ್ನಡ ಜನತಾ ರಂಗ ಪತ್ರಿಕೆಯಲ್ಲಿ, ಶಕ್ತಿ ಪತ್ರಿಕೆಯಲ್ಲಿ, ಆಂದೋಲನ ಪತ್ರಿಕೆಯಲ್ಲಿ ಕೊಡಗಿನಲ್ಲಿ, ''ಐ.ಎಸ್.ಐ. ಜಾಲ ಕಾರ್ಯಾಚರಣೆ'' ಎಂದು ಪತ್ರಿಕೆಯಲ್ಲಿ ಬಂದಿದೆ. ಅದರ ಜೊತೆಗೆ ಕೊಯಮತ್ತೂರಿನಲ್ಲಿ ಬಾಂಬ್ ಬ್ಲಾಸ್ಟ್ ಮಾಡಿದಂತಹ ಕೆಲವು ವ್ಯಕ್ತಿಗಳು ಸಿದ್ದಾಪುರದಲ್ಲಿ ಬಂಧಿಸಿದ್ದರು ಎಂದು ಪತ್ರಿಕೆಯಲ್ಲಿ ಬಂದಿದೆ. ಮತ್ತೊಂದು ವಿಚಾರ, ಕೊಡಗಿನ ಒಬ್ಬ ಇಂಜಿನಿಯರ್‌ಗಳಲ್ಲಿರುವ ಹೆಡ್ ಕಾನ್ಸ್‌ಟೇಬಲ್ ಗೂಟಪ್ಪ ಅವರು ಪಾಕಿಸ್ಥಾನದ ಪ್ರಜೆಯ ಸಂಬಂಧ ಇಟ್ಟುಕೊಂಡಿದ್ದ ಎಂಬ ಆರೋಪದ ಮೇಲೆ ಅವರನ್ನು

ಅಮಾನತುಗೊಳಿಸಲಾಗಿದೆ ಎಂದು ಪತ್ರಿಕೆಯಲ್ಲಿ ಬಂದಿದೆ. ಇದನ್ನು ತಾವು ಗಂಭೀರವಾಗಿ ಚಿಂತನೆ ಮಾಡಿ, ವಿಚಾರಣೆ ಮಾಡಬೇಕು, ಮತ್ತು ಯಾರ ಮನೆಯಲ್ಲಿ ಅವರನ್ನು ಉಳಿಸಿಕೊಂಡಿದ್ದರು, ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ, ಒಂದು ವೇಳೆ ಕ್ರಮ ತೆಗೆದುಕೊಂಡಿರದಿದ್ದರೆ ಕೂಡಲೇ ಅವರ ಮೇಲೆ ಕ್ರಮ ಕೈಗೊಳ್ಳಬೇಕು. ಅದರ ಜೊತೆಗೆ ಕೊಡಗಿನ ಕರ್ಕೆ ಮತ್ತು ವಿರಾಜಪೇಟೆ ಮುಖಾಂತರವಾಗಿ ಕೇರಳದಿಂದ ಬಂದಂತಹ ಜನರು ನೆಲೆಸಿದ್ದಾರೆ. ಅವರು ಐ.ಎಸ್.ಐ.ಗೆ ಸೇರಿದಂತವರು ಎಂದು ಪತ್ರಿಕೆಯಲ್ಲಿ ಬಂದಿದೆ. ಆದಕಾರಣ ಆದಷ್ಟು ಬೇಗ ಅವರ ಮೇಲೆ ಕ್ರಮ ತೆಗೆದುಕೊಂಡು, ಅವರ ವಿಚಾರವಾಗಿ ಕೂಲಂಕಷವಾಗಿ ಚರ್ಚೆ ಮಾಡಿ, ಈ ವಿಚಾರವನ್ನು ಗಾಂಭೀರ್ಯದಿಂದ ತೆಗೆದುಕೊಂಡು ಇದಕ್ಕೆ ಉತ್ತರ ಕೊಡಬೇಕೆಂದು ಗೃಹ ಮಂತ್ರಿಯವರನ್ನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಶ್ರೀ ನಾಗೇಗೌಡರು ಇದರ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಈ ದಿವಸ ಅಥವಾ ನಾಳೆ ಇದರ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ತರಿಸಿ ಕೊಡುತ್ತೇವೆ.

5) ಗಮನ ಸೆಳೆಯುವ ಸೂಚನೆ

ವಿಷಯ: ರಾಜ್ಯದಲ್ಲಿ ಮುಂಗಾರು ಮತ್ತು ಹಿಂಗಾರಿನ ಮಳೆ ಬಾರದೆ ಬೆಳೆಗಳು ಹಾಳಾಗಿರುವುದರಿಂದ ದೀರ್ಘಾವಧಿ ಮತ್ತು ಅಲ್ಪಾವಧಿ ಸಾಲಕ್ಕೆ ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ.

ಶ್ರೀ ಡಿ.ಆರ್.ಪಾಟೀಲ್ (ಗದಗ್): ಸನ್ಮಾನ್ಯ ಉಪಾಧ್ಯಕ್ಷರೆ, ಹೋದ ವರ್ಷ ಮುಂಗಾರು ಮತ್ತು ಹಿಂಗಾರು ಮಳೆ ಸಾಕಷ್ಟು ಬಾರದೆ ಬೆಳೆಗಳು ಹಾಳಾಗಿ ರೈತಾಪಿ ಜನರಿಗೆ ಸಾಕಷ್ಟು ತೊಂದರೆಯಾಗಿದೆ. ಅವರು ಪಡೆದುಕೊಂಡಿರುವಂತಹ ದೀರ್ಘಾವಧಿ ಸಾಲವಾಗಲಿ, ಅಲ್ಪಾವಧಿ ಸಾಲವಾಗಲಿ ಅದನ್ನು ತಿರೀಸುವಂತಹ ಸ್ಥಿತಿಯಲ್ಲಿ ಅವರು ಇಲ್ಲ. ಆದುದರಿಂದ ಈ ಎರಡೂ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಿ, ಈ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಿ, ಮುಂದಿನ ಮುಂಗಾರು ಮತ್ತು ಹಿಂಗಾರು ದಿವಸದಲ್ಲಿ ಬೆಳೆ ಸಾಲ ಸಿಗುವಂತೆ ವ್ಯವಸ್ಥೆ ಮಾಡುವುದಕ್ಕೆ ಸಹಕಾರ ಸಚಿವರ ಗಮನವನ್ನು ಸೆಳೆಯುತ್ತೇನೆ.

+ ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ರಾಜ್ಯದಲ್ಲಿರುವ ಹಲವಾರು ತಾಲ್ಲೂಕುಗಳು ಮುಂಗಾರು ಮತ್ತು ಹಿಂಗಾರು ಮಳೆ ಸಾಕಷ್ಟು ಬಾರದೇ ಬರ ಪೀಡಿತಕ್ಕೆ ಒಳಪಟ್ಟಿರುವುದು ಸಹಕಾರ ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಬರ ಪೀಡಿತ ಪ್ರದೇಶಕ್ಕೆ ಒಳಪಟ್ಟಿರುವ ರೈತರು ಸಹಕಾರ ಸಂಘಗಳಿಂದ ಪಡೆದಿರುವ ಸಾಲ ಮತ್ತು